


## ಸಮುದ್ರ ಮಥನ




### ಮಾತಿನ ಮಹತ್ವ

'ಮಾತೇ ಮುತ್ತು' ಎನ್.ವಿಶಾಖರ ಮುಖಪುಟ ಲೇಖನ ಬದಲಾದ ಕಾಲದಲ್ಲಿ ಮಾತು ಪಡೆದ ಮಹತ್ವದ ಬಗ್ಗೆ ತಿಳಿಸಿಕೊಡುತ್ತದೆ. ಕಾಡುಹರಟೆ ಈಗ ಕಾಸಾಗಿ ಪರಿವರ್ತನೆಯಾಗುತ್ತಿದೆ!

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ಕೋಟೆ ಸೂರ್ಯನಾರಾಯಣ ರಾವ್, ಬೆಂಗಳೂರು

### ಮಾತು ತುಪಾಕಿಯಲ್ಲ, ಪಾತಕಿ

'ನಾವು ಆಡುವ ಮಾತು ಹೀಗಿರಲಿ ಗೆಳತಿ' ಉಪ ಶೀರ್ಷಿಕೆಯ ಆಶಯವೇನು? ವಿಶಾಖ ಅವರು ಹೇಳುವಂತೆ ನುಡಿ ತುಪಾಕಿ ಗಳಾಗ ಬೇಕೆ? ಮಾತು ಮಾರುಕಟ್ಟೆಯ ಸರಕಾಗಬೇಕೆ? ಮಾತು ಇದ್ದೋನೆ ಬಾಸು ಆಗಬೇಕೆ? ರೇಡಿಯೋ ಮಿರ್ಚಿಯಂತಹ ಎಫ್.ಎಂ.ಹಾವಳಿಯಿಂದ ಆಕಾಶವಾಣಿ ಬಾಯಿ ಕಟ್ಟಿದೆ. ಟೀವಿಯಿಂದ ಭಾಷಾ ಮಾಲಿನ್ಯ, ಸಂಸ್ಕೃತಿ ಮಾಲಿನ್ಯ ಆಗಿದೆ. ಮಾತು ತುಪಾಕಿಯಲ್ಲ, ಪಾತಕಿಯಾಗುತ್ತಿದೆ. ಹಾಸ್ಯೋತ್ಸವಗಳ ಅವತಾರ ತಾತ್ಕಾಲಿಕ ಟೆಂಟ್ ಅಷ್ಟೆ.

- ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

### ಮುತ್ತು-ಚಿತ್ರ!

'ಮಾತೇ ಮುತ್ತು' ಇರಬಹುದು. ಆದರೆ ಹತ್ತು ಮಾತಿಗಿಂತ ಒಂದು ಚಿತ್ರ ಉತ್ತಮವಾಗಬಹುದು. ಉದಾಹರಣೆಗೆ ಮಹಮ್ಮದ್ ಅವರ 'ನೀನೇ... ಸಾಕಿದ ಗಿಣಿ...!' ಎಂಬ ಸೊಗಸಾದ ಶೀರ್ಷಿಕೆಯ 'ಕಾರ್ಟೂನ್!'

- ಸಿಪಿಕೆ, ಮೈಸೂರು

### ವ್ಯಂಗ್ಯಚಿತ್ರ ಸೂಪರ್

ಹಾಸ್ಯೋತ್ಸವ ಕಾರ್ಯಕ್ರಮಗಳಿಗೆ ಮನ್ನಣೆ ದೊರೆಯಲಿ, ಮುತ್ತಿನಂತಹ ಮಾತು ಮತ್ತೆ ಮತ್ತೆ ಕೇಳಿಸುವಂತಾಗಲಿ. ಪ್ರತೀ ವಾರದ 'ಕಾರ್ಟೂನ್' ಅಂಕಣ ಸೂಪರ್.

-ಗುರುಮೂರ್ತಿ ಇಂದ್ರಾಳಿ, ಉಡುಪಿ

### ಈಗ ನವ ಮಂತ್ರಾಲಯ

ರಾಯರ ಮಂತ್ರಾಲಯ ನವ ಮಂತ್ರಾಲಯವಾಗಿ ಬೆಳೆದ ಪರಿಯನ್ನು ರಾಮರಡ್ಡಿ ಅಳವಂಡಿ ಸೂಕ್ತವಾಗಿ ಕಟ್ಟಿಕೊಟ್ಟಿದ್ದಾರೆ.

-ಎಚ್.ಆನಂದಕುಮಾರ್, ಚಿತ್ರದುರ್ಗ

### ಅಂತರಂಗ ಕಲಕಿದ ಕಥೆ

ಬಿ. ತಿಪ್ಪಣ್ಣ ಮರಿಕುಂಟೆ ಅವರ 'ರಾಜ ಧರ್ಮ'ಕಥೆ ತುಂಬಾ ಚೆನ್ನಾಗಿದೆ. ವಾಲಿಯ ಪತ್ನಿ ತಾರಾಳ ಮನದಾಳದ ಮಾತುಗಳು ಅಂತರಂಗವನ್ನು ಕಲಕುವಂತಿವೆ. ಇಂತಹ ಚಿಂತನಶೀಲ ಪೌರಾಣಿಕ ಕತೆಗಳು ಹೆಚ್ಚು ಪ್ರಕಟವಾಗಲಿ.

-ಸು. ವಿಜಯಲಕ್ಷ್ಮಿ, ಶಿವಮೊಗ್ಗ/ ರಾಜಶೇಖರ ಗೌಡ, ಕೊಟ್ಟೂರು

### ವಾಲ್ಮೀಕಿ ರಾಮಾಯಣದಲ್ಲಿ ಇದೆಯೆ?

ವಾಲಿ ಸುಗ್ರೀವನನ್ನು ರಾಜ್ಯದಿಂದ ಹೊರಹಾಕಿದ ನಂತರ ಆತನ ಪತ್ನಿ ರುಮೆಯಲ್ಲಿ ಆಸಕ್ತನಾಗಿದ್ದರ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲಿ ಇದೆಯೇ? ಆದರೆ ಸುಗ್ರೀವನು ಅತ್ತಿಗೆಯೊಡನೆ ಕಾಮಾಸಕ್ತನಾಗುವ ವಾಸ್ತವ ಚಿತ್ರ ಚೆನ್ನಾಗಿ ಮೂಡಿಬಂದಿದೆ.

-ಚಂದ್ರಯ್ಯ ಶ್ರೀರಾಂಪುರ, ಚಿತ್ರದುರ್ಗ

### ಮನಸೆಳೆದ ಶಿಲ್ಪವನ

ರಘುನಾಥ ತಾಪ್ಸೆಯವರ 'ನೋಡ ಬನ್ನಿ ಶಿಲ್ಪವನ' ಮನಸೆಳೆಯಿತು. ಖ್ಯಾತ ಕಲಾವಿದ ಸೊಲಬಕ್ಕನವರ ಶ್ರಮದಿಂದ ನಿರ್ಮಿತವಾದ ಈ ಶಿಲ್ಪವನ ಕನ್ನಡಿಗರ ಹೆಮ್ಮೆಯ ವಿಷಯವಾಗಿದೆ.

-ಲೋಕಪ್ರಿಯ, ಕೈವಾರ/ ಶೋಭಾ ಮಹೇಂದ್ರಕರ, ಹಾವೇರಿ

### ಕನ್ನಡಿಗರ ಹೆಮ್ಮೆ

'ಗೋಡೆ'ಯ ಆಟಕ್ಕಿಲ್ಲ ತಡೆ! ಕಲಾತ್ಮಕ ಆಟಗಾರ ರಾಹುಲ್ ದ್ರಾವಿಡರ ಬಗ್ಗೆ ಗಿರೀಶ ದೊಡ್ಡಮನಿ ಬರೆದ ಲೇಖನ ಓದಿ ಹೆಮ್ಮೆಯಾಯ್ತು.

-ಕಾಳೀಹುಂಡಿ ಶಿವಕುಮಾರ್, ಮೈಸೂರು

### ಮನಸೂರೆಗೊಳ್ಳುವ 'ಸುಧಾ'

'ಸುಧಾ' ವಾರಪತ್ರಿಕೆ ಓದುಗರ ಸಂಖ್ಯೆ ನಾಲ್ಕು ಲಕ್ಷ ದಾಟಿರುವುದು ಎಲ್ಲರಿಗೂ ಸಂತಸದ ವಿಷಯ. ಇದಕ್ಕೆ ಕಾರಣ 'ಸುಧಾ'ದಲ್ಲಿ ಬರುವ ಎಲ್ಲಾ ಲೇಖನಗಳು ಮತ್ತು ವರ್ಣರಂಜಿತ ಚಿತ್ರಗಳು. ಇವು ಮನಸೂರೆಗೊಳ್ಳುತ್ತವೆ. ಬಾಲಕರಿಂದ ವಯೋವೃದ್ಧರವರೆಗೆ ಎಲ್ಲ ವಯೋಮಾನದವರು ಓದುವಂತಿರುವ ಅಂದವಾದ ಮುದ್ರಣ. ಅದಕ್ಕಾಗಿಯೇ 'ಸುಧಾ' ಎಂದರೆ ಎಲ್ಲರೂ ಇಷ್ಟ ಪಡುವುದು.

-ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು